ಹುರುಪಾಗಲಾರಂಭಿಸಿದರು. ಯುವಜೋಡಿ ರಿಶಭ್ ಹಾಗೂ ರಕ್ಷಿತಾ ತಕ್ಕ ಮಟ್ಟಿಗೆ ಒಳ್ಳೆಯ
ನರ್ತನವನ್ನೇ ಮಾಡತೊಡಗಿದರು. ಶಾಲೂನ ಕಾಲುಗಳು ಕುಳಿತಲ್ಲೇ ತಾಳ ಹಾಕಲಾರಂಭಿಸಿದವು.
ಅಷ್ಟರಲ್ಲಿ ಫೆಲಿಕ್ಸ್ ಎದ್ದು ಕುಣಿಯಲಾರಂಭಿಸಿದ. ಅವನದು ನುರಿತ ನರ್ತಕನ ಪರ್ಫೆಕ್ಟ್ ಹೆಜ್ಜೆಗಳು.
ಸ್ಟೆಪ್ಪುಗಳಲ್ಲಿ ಲಯ, ಮುಖದಲ್ಲಿ ತೇಲಾಡುತ್ತಿರುವ ಮುಗುಳ್ನಗೆ, ಕೈಗಳನ್ನು ಗಾಳಿಯಲ್ಲಿ ಮೃದುವಾಗಿ
ತೇಲಿಸುವ ಸೌಂದರ್ಯ, ಇಳಿಸಂಜೆಯ ಗಾಲಾ ಪಾರ್ಟಿಗೆ ರಂಗು ತುಂಬಿತು. ಎಲ್ಲರ ಮುಖದಲ್ಲಿಯೂ
ಸಡಗರ, ಸಂಭ್ರಮ, ನಾಟ್ಯವಾಡುತ್ತ ಮತ್ತೇರುವ ವಾತಾವರಣ ತನಗೆ ತಾನೇ ಸೃಷ್ಟಿಯಾಯ್ತು.

ಸರಿಯಾಗಿ ಅದೇ ಹೊತ್ತಿಗೆ ಫೆಲಿಕ್ಸ್ ಇವಳ ಹತ್ತಿರ ಬಂದವನೇ ಕೈ ನೀಡಿದ. ಪುಂಗಿಯ ನಾದಕ್ಕೆ
ಮನಸೋತು ತೂಗುವ ನಾಗಿಣಿಯಂತೆ ತೂಗುತ್ತ ಶಾಲೂ ಫೆಲಿಕ್ಸನ ಕೈಗಳಲ್ಲಿ ತನ್ನ ಕೈಗಳನ್ನು ಸೇರಿಸಿ
ಡುಯೆಟ್‌ಗೆ ಹೆಜ್ಜೆ ಹಾಕಲಾರಂಭಿಸಿದಳು. ಎಷ್ಟೋ ವರ್ಷಗಳಿಂದ ಇದಕ್ಕಾಗಿಯೇ ಕಾದಿದ್ದವಳಂತೆ
ಅದರ ಗುಂಗಿನಲ್ಲೇ ಕಳೆದುಹೋದಳು. ಪಿಯಾನೋದ ಸ್ವರಗಳು ಈಗ ವಿಶಾಲ ಸಾಗರದ ಮಧ್ಯೆ
ಬಿರುಗಾಳಿಗೆ ಸಿಲುಕಿ ಹೊಯ್ದಾಡುವ ದೋಣಿಯ ತಲ್ಲಣದಂತೆ ಹೆಜ್ಜೆ ತಪ್ಪತೊಡಗಿದವು. ಇದೀಗ
ಅವಳ ಬಲಗೈಯನ್ನು ಬಿಟ್ಟ ಫೆಲಿಕ್ಸ್ ಮೃದುವಾಗಿ ಅವಳ ಸೊಂಟವನ್ನು ಬಳಸಿ ನರ್ತಿಸಲಾರಂಭಿಸಿದ.
ಆರಡಿ ಎತ್ತರದ ಫೆಲಿಕ್ಸನ ಜೊತೆ ಕೀಲಿ ಕೊಟ್ಟ ಪುಟ್ಟ ಬೊಂಬೆಯಂತೆ ಶಾಲೂ ನರ್ತಿಸಿದಳು. ಅವಳ
ಜೀವನದ ಪ್ರಥಮ ಜೋಡಿ ನರ್ತನ ಅದಾಗಿತ್ತು. ಅನೇಕ ಮೊಬೈಲ್‌ಗಳು ವಿಡಿಯೊ ಮಾಡುತ್ತಿದ್ದವು.
ಫೋಟೊ ಫ್ಲ್ಯಾಷ್‌ಗಳು ಆಗಾಗ ಕಣ್ಣು ಕೋರೈಸುತ್ತಿದ್ದವು. ಪಿಯಾನೋದ ಯುವಕ ಈಗ ತಾನೂ
ಉನ್ಮತ್ತನಾದವನಂತೆ ಅನೇಕಾನೇಕ ಸ್ವರಗಳನ್ನು ಹುಟ್ಟಿಸುತ್ತ ಎದ್ದೆದ್ದು ಕೂರುತ್ತಿದ್ದ. ಫೆಲಿಕ್ಸ್ ಈಗ

